ಈ ವಿದ್ಯಾರ್ಥಿಯ ಸಾವಿಗೆ ಹೊಣೆ ಯಾರು ?

[ಪಂಚಮ ಪ್ರತಿನಿಧಿಯಿಂದ]



ಬದುಕಿನಲ್ಲಿ ಉಜ್ವಲ ಭವಿಷ್ಯ ಕಾಣಬೇಕಾಗಿದ್ದ ಬೆಂಗಳೂರಿನ ಬಾಪೂಜಿ ರೆಸಿಡೆನ್ಶಿಯಲ್ ಶಾಲೆಯ ಜಿ. ತಿಪ್ಪೇಸ್ವಾಮಿ ಎಂಬ ದಲಿತ ವಿದ್ಯಾರ್ಥಿಯ ಬದುಕು ಆ ಹಾಸ್ಟೆಲಿನ ಆಡಳಿತ ವರ್ಗದ ನಿರ್ಲಕ್ಷತೆಯಿಂದ ಕಮರಿಹೋಯಿತು.

ಚಿತ್ರದುರ್ಗ ಜಿಲ್ಲೆಯ ಕೂಲಿಗಾರ ದಲಿತ ವಿಧವೆಯೊಬ್ಬರ ಮಗ ತಿಪ್ಪೇಸ್ವಾಮಿ. ಕೂಲಿ ಮಾಡಿ ಹೊಟ್ಟೆಬಟ್ಟೆ ಕಟ್ಟಿ ಮಗನನ್ನು ಎಸ್. ಎಸ್. ಎಲ್. ಸಿ. ಮೆಟ್ಟಿಲು ಹತ್ತಿಸಿ ಆತನಿಂದ ಸುಂದರ ಬದುಕಿನ ಆಸೆಯನ್ನು ಆ ತಾಯಿ ಹೊತ್ತಿದ್ದಳು. ವಾಸ್ತವವಾಗಿ ಆಸ್ತಿಪಾಸ್ತಿ ಇಲ್ಲದ ದಲಿತರಿಗೆ ಶಿಕ್ಷಿತ ಮಕ್ಕಳೇ ಆಸ್ತಿ.

ತಿಪ್ಪೇಸ್ವಾಮಿ ಓದುವುದರಲ್ಲಿ ಬಲುಚೂಟಿ-ಅಷ್ಟೇ ಸೌಮ್ಯ. ತನ್ನ ಎಳೆತನದಲ್ಲೇ ಅನ್ಯಾಯಗಳ ಬಗ್ಗೆ ಸಿಟ್ಟು-ಆಕ್ರೋಶ ತುಂಬಿಕೊಂಡಿದ್ದವ. ಅದಕ್ಕಾಗಿ ಹಾಸ್ಟೆಲಿನ ಅನ್ಯಾಯ, ಅನಾಚಾರ, ಭ್ರಷ್ಟಾಚಾರಗಳ ವಿರುದ್ಧ ವಿದ್ಯಾರ್ಥಿಗಳಿಗೆ ಹೋರಾಟದ ದನಿಕೊಟ್ಟಿದ್ದ ಎಸ್. ಎಫ್. ಐ ಗೆ ಬೆಂಬಲ ಕೊಡುತ್ತಿದ್ದ.

(7ನೇ ಪುಟ ನೋಡಿ)

ಪಂಚಮ

ಎಲ್ಲ ಬಗೆಯ ಆರ್ಥಿಕ, ಧಾರ್ಮಿಕ, ಸಾಮಾಜಿಕ, ಬೌದ್ಧಿಕ ದಬ್ಬಾಳಿಕೆಯ ವಿರುದ್ಧ ದಲಿತರಲ್ಲಿ ಪ್ರಜ್ಞೆ ಮೂಡಿಸಲು ಯತ್ನಿಸುತ್ತಿರುವ ಪಂಚಮಕ್ಕೆ ಚಂದಾದಾರರಾಗಿರಿ.

ಲೇಖನ-ಸುದ್ದಿ ಕಳುಹಿಸುವ ಮೂಲಕ ನೋವುಳ್ಳವರ ನುಡಿಯಾಗಿರುವ ಪಂಚಮವನ್ನು ನಿಮ್ಮ ದನಿಯನ್ನಾಗಿಸಿಕೊಳ್ಳಿ.

ಸಂಪುಟ : 5, ಸಂಚಿಕೆ : 1, 5, ಜನವರಿ 1981 ಪಾಕ್ಷಿಕ ಬೆಲೆ : 20 ಪೈಸೆ ವಾರ್ಷಿಕ ಚಂದಾ 5 ರೂ.ಗಳು

ಬಿಹಾರ : ದಲಿತರ ಮೇಲೆ ಮತ್ತೊಂದು ಬರ್ಬರ ಕೃತ್ಯ

ದಲಿತರನ್ನು ಸಾಮೂಹಿಕವಾಗಿ ಜೀವಂತ ಸುಡುವುದಕ್ಕೆ ಹೆಸರಾಗಿರುವ ಬಿಹಾರದಲ್ಲಿ ದಲಿತರಿಗಿಂದು ಬದುಕೇ ಇಲ್ಲ. ಜಾತಿ-ಬಡತನ ಮತ್ತು ಭೂಸ್ವಾಮಿಗಳ ಹಿಡಿತದಿಂದ ವಿಮುಕ್ತಿ ಇಲ್ಲ. ಜಗತ್ತಿಗೆ ಶಾಂತಿ ಸಮಾನತೆಯನ್ನು ಸಾರಿದ ಬುದ್ಧನಿಗೆ ಜ್ಞಾನೋದಯವಾದ ಬೋಧಗಯಾದಲ್ಲಿ ಇಂದು ದಲಿತರಿಗೆ ಶೋಷಣೆಯ ಬಂಧನ.



ಈ ಹಿಂದೆ ಸುಮಾರು 23 ಸಾವಿರ ಎಕರೆಯಷ್ಟಿದ್ದ ಬೋಧಗಯಾ ಮಠದ ಭೂಮಿಯನ್ನು ಅಲ್ಲಿನ

(2ನೇ ಪುಟ ನೋಡಿ)

ಶಿವಮೊಗ್ಗ ಕೊಳಗೇರಿ ನಿವಾಸಿಗಳಿಗೆ ಸೈಟು ನೀಡಿ

[ಪಂಚಮ ಪ್ರತಿನಿಧಿಯಿಂದ]

ಶಿವಮೊಗ್ಗ ನಗರ ತೀರ್ಥಹಳ್ಳಿ ರಸ್ತೆ ಮೂಲೆಯಲ್ಲಿರುವ ನಮ್ಮ ಮಂಡಲಿ ಒಂದು ಕೊಳಚೆಗೇರಿ, ಇಲ್ಲಿ ಸುಮಾರು 200 ಬಡಕುಟುಂಬಗಳು ವಾಸಿಸುತ್ತಿವೆ, ಇವರಲ್ಲಿ ಹಂದಿಗೊಲ್ಲರು 40 ಮನೆಗಳು. ಗೌಡ ದೇವಾಂಗ, ಮತ್ತು ಕುರುಬರು, 50 ಮನೆಗಳು ಹರಿಜನರು, 80 ಮನೆಗಳು, ಮುಸ್ಲಿಮರು 4 ಮನೆಗಳು ಇವೆ.

ಈಜನ ಇಲ್ಲಿಗೆ 40 ವರ್ಷಗಳ ಹಿಂದೆ ಬಂದು ನೆಲಸಿದರು, ಆಗ ನಮ್ಮದೇಶಕ್ಕೆ ಇನ್ನೂ ಸ್ವಾತಂತ್ರ ಬಂದಿರಲಿಲ್ಲ. ಈ ಪ್ರದೇಶವೆಲ್ಲ ಕಾಡಾದಿತ್ತು; ಇಲ್ಲಿ ಸತ್ತ ಹೆಣಗಳನ್ನು ಹೂಳುತ್ತಿದ್ದರು. ಅಲ್ಲಿಂದ ಇಲ್ಲಿಯವರೆಗೆ ಎರಡು ತಲೆಮಾರು ಕಳೆದಿರುವ ಈಜನ ಈ ನೆಲ ತಮ್ಮದೆನ್ನುವಂತೆ ಬದುಕಿದ್ದಾರೆ. ಸ್ವತಂತ್ರ ಭಾರತದ ಭೂಸುಧಾರಣೆ-ಗೇಣಿಹಕ್ಕುಗಳು-ಮುಜರಾಯಿ ಭೂಕಾನೂನು, ಯಾವುದರ ಅನ್ವಯ ಏನೇ ಇದ್ದರೂ ಮೂಲತಃ ಇಲ್ಲಿ ವಾಸ ಮಾಡುವ ಜನರಿಗೆ ಸೈಟು ಕೊಟ್ಟು ಅನಂತರ ಇತ್ಯರ್ಥವಾಗಬೇಕಾಗಿತ್ತು. ನೈಜಸ್ಥಿತಿ ಹೀಗಿದ್ದರೂ, ಇವರಿಗೆ ಇನ್ನೂ ಸೈಟುಗಳ ವಿಲೇವಾರಿ ಆಗದೆ ಒಕ್ಕಲೆಬ್ಬಿಸುವ ಕೆಲಸ ನಡೆದಿರುವುದು ಬಡವರ ಬಂಧು(?) ಇಂದಿರಮ್ಮನ ಸರ್ಕಾರದಲ್ಲಿ ಬಡವರಿಗೆ ನ್ಯಾಯಸಿಕ್ಕುತ್ತಿಲ್ಲ ಎಂಬುದಕ್ಕೆ ಸ್ಪಷ್ಟ ಉದಾಹರಣೆಯಾಗಿದೆ.

ನಮ್ಮ ಮಂಡಲಿ ಸರ್ವೆ ನಂ. 242, 243, ಈಶ್ವರ ದೇವಸ್ಥಾನಕ್ಕೆ ಸೇರಿದ ಮುಜರಾಯಿ ಭೂಮಿ ಎಂದು ತಿಳಿದಿರುತ್ತದೆ. ಇಲ್ಲಿ ಹನ್ನೆರಡುವರೆ ಎಕರೆ ಭೂಮಿ ಇದ್ದು, ಇದನ್ನು ಕಳೆದ ಮೂರು ದಶಕಗಳಲ್ಲಿ ಬೇರೆಬೇರೆ ಉದ್ದೇಶಗಳಿಗಾಗಿ ಸರ್ಕಾರದವರು ಸ್ವಾಧೀನ ಮಾಡಿಕೊಂಡಿರುತ್ತಾರೆ. ಈ ಹಿಂದೆ ಶಿವಮೊಗ್ಗ ಜಿಲ್ಲಾಧಿಕಾರಿಗಳಾಗಿದ್ದ ಹೊಂಬಾಳಯ್ಯನವರು ಇದೇ ಭೂಮಿಯ ಕೆಲ ಭಾಗವನ್ನು ಸ್ವಾಧೀನ ಮಾಡಿ ಬಡವರಿಗಾಗಿ ಸೈಟುಮಾಡಿ ಹಂಚಿದ್ದಾರೆ, ಕೆ.ಇ.ಬಿ ಯವರು ಒಂದು ಎಕರೆ ಭೂಮಿಯಲ್ಲಿ ಎಲೆಕ್ಟ್ರಿಸಿಟಿ ಕ್ವಾರ್ಟರ್ಸ್‌ಗಳನ್ನು ಕಟ್ಟಿದ್ದಾರೆ. ಇಲ್ಲಿ ಹಲವಾರು ವರ್ಷಗಳಿಂದ ಸಾಗುವಳಿ ಮಾಡುತ್ತಾ ಬಂದಿದ್ದ ಶ್ರೀಮತಿ ಸಿದ್ದಲಿಂಗಮ್ಮ ಎಂಬುವವರಿಗೆ ಗೇಣಿ ಹಕ್ಕಿನ ಪ್ರಕಾರ ಒಂದೂವರೆ ಎಕರೆ ಭೂಮಿ ಮಂಜೂರು ಆಗಿದೆ.

ಈ ಪ್ರದೇಶದಲ್ಲಿ ವಾಸಿಸುವವರ ಮಕ್ಕಳಿಗಾಗಿ ಶಾಲೆಯನ್ನು ಕಟ್ಟಲಾಗಿತ್ತು, ಶಾಲಾ ಆಟದ ಮೈದಾನಕ್ಕಾಗಿ ಒಂದುಎಕರೆ ಭೂಮಿಯನ್ನು ಕಾದಿರಿಸಲಾಗಿದೆ, ಪಕ್ಕದಲ್ಲಿಯೆ ಖಾಸಗಿ ರೈಸ್ ಮಿಲ್ ಒಂದನ್ನು ಕಟ್ಟಲಾಗಿದೆ.

ಹೀಗೆ ಬೇರೆಬೇರೆ ಜನ ತಮ್ಮ ಅನುಭೋಗಕ್ಕಾಗಿ ಇಲ್ಲಿನ ಭೂಮಿಯನ್ನು ಆಕ್ರಮಿಸಿರುವಾಗ ಸರ್ಕಾರವು ಸ್ವಾತಂತ್ರ ಪೂರ್ವದಿಂದಲೂ ಇಲ್ಲಿ ವಾಸಮಾಡುತ್ತಿರುವ ಬಡವರಿಗೆ ಮನೆ ನಿವೇಶನಗಳನ್ನು ಕೊಡದೆ ಇರಲು ಕಾರಣವೇನು ? ಇವರೇನು ಬೇರೆ ದೇಶದಿಂದ ವಲಸೆ ಬಂದವರೇ ? ಅಥವಾ ನಗರ ನಿವಾಸಿಗಳು ಅಲ್ಲವೆ?

ದಿಲ್ಲಿ ರಾಜಕೀಯದಿಂದ ಹಿಡಿದು ಕರ್ನಾಟಕ ರಾಜಕೀಯ ವರೆಗೆ ಎಷ್ಟೋ ಪಕ್ಷಗಳು ಗದ್ದುಗೆ ಹತ್ತಿ ಇಳಿದು, ಅನೇಕ ಪ್ರಧ... ಮಂತ್ರಿ-ಮುಖ್ಯಮಂತ್ರಿಗಳು ಆಗಿಹೋದ... ಶಿವಮೊಗ್ಗ ಮುನಿಸಿಪಾಲಿಟಿ ಅಧ್ಯಕ್ಷರು ಎ... ಜನ ಇಂದು ಸತ್ತು ಕಣ್ಮರೆಯಾಗಿದ್ದಾರೆ! ... ರೆಲ್ಲ ಬಡವರಿಗೆ ಹೇಳಿದ್ದು, ವಾಗ್ದಾನಮಾಡಿ... "ಈ ಬಾರಿ ಚ.ನಾವಣೆಯಲ್ಲಿ ನಮಗೆ ಓ... ಕೊಡಿ, ಖಂಡಿತ ನಿಮಗೆ ಸೈಟುಕೊಡಿಸುತ್ತೇ... ಹೀಗೆ ಬಡವರ ಹೆಸರಿನಲ್ಲಿ ಓಟು ತೆಗೆದುಕೊಂ... ಹೋದ ಜನ ಅಧಿಕಾರಕ್ಕೆ ಬಂದರು. ಆ... ಓಟುಕೊಟ್ಟ ಬಡವರನ್ನೇ ಮರೆತರು.

ಕಳೆದ ಹತ್ತಾರು ವರ್ಷಗಳಿಂದ ನಮ್ಮ ಮಂಡ... ಬಡಾವಣೆಯ ಕೊಳೆಗೇರಿ ನಿವಾಸಿಗಳು ಬೆಂಗ... ರಿನಿಂದ ದಿಲ್ಲಿವರೆಗೆ, ನೂರಾರು ಅರ್ಜಿಗಳ... ಬರೆದರು. "ನಮಗೆ ನಿವೇಶನಕೊಡಿ" ಎಂ... ಬೇಡಿದರು. ಮಂತ್ರಿಗಳಿಗೆ ಎಂ ಎಲ್.ಎ.ಗಳ... ನಗರ ಸಭಾಧ್ಯಕ್ಷರಿಗೆ,-ಸದಸ್ಯರಿಗೆ. ಹೂ ಹ... ಹಾಕಿ ಅಂಗಲಾಚಿದರು. ಅಡ್ಡಬಿದ್ದರು. ಅ... ನರಿಯ ಕೂಗು ಗಿರಿ ಮುಟ್ಟಲಿಲ್ಲ, ಸರ್ಕಾ... ಈ ಇಬ್ಬಗೆಯ ನೀತಿ ಖಂಡಿಸಿ ದಲಿತ ಸಂಘ... ಸಮಿತಿ ಶಿವಮೊಗ್ಗ ಜಿಲ್ಲಾ ಶಾಖೆ ಸದ್ಯದ... ಹೋರಾಟವೊಂದನ್ನು ಆರಂಭಿಸಲಿದೆ

ಬರ್ಬರ ಕೃತ್ಯ

(1ನೇ ಪುಟದಿಂದ)

ಪೂಜಾರಿಗಳು ಲಪಟಾಯಿಸಿದ್ದಾರೆ. ಇವರು ಈಗ ಎಷ್ಟು ಎಕರೆ ಭೂಮಿ ಹೊಂದಿದ್ದಾರೆಂಬುದನ್ನು ಪತ್ತೆ ಹಚ್ಚಲು ಸರ್ಕಾರವೇ ವಿಫಲಗೊಂಡಿದೆ.

ದೇವರು-ಧರ್ಮದ ಹೆಸರಿನಲ್ಲಿ ಸಹಸ್ರಾರು-ನೂರಾರು ಎಕರೆ ಜಮೀನು ಲೂಟಿಮಾಡಿರುವ ಈ ಮಠದ ಪೂಜಾರಿಗಳು ಅನೇಕ ಗೂಂಡಾಗಳು, ಸೇವಕರು, ಚೇಲಾಗಳು, ಸನ್ಯಾಸಿಗಳು ಮತ್ತು ಬಂದೂಕುಧಾರಿಗಳ ದಂಡನ್ನೇ ಇಟ್ಟುಕೊಂಡಿದ್ದಾರೆ

ಮಠದ ಸಹಸ್ರಾರು ಎಕರೆ ಭೂಮಿಯನ್ನು ಇಂದು ಸುತ್ತಮುತ್ತಲಿನ ಸಹಸ್ರಾರು ದಲಿತರ ದುಡಿಮೆಯಿಂದ ಅಚ್ಚ ಹಸಿರುಗೊಳಿಸಿ ಸಮೃದ್ಧ ಬೆಳೆಯನ್ನೇ ತೆಗೆಯಲಾಗುತ್ತಿದೆ. ಬಾ ನ ಗ ಲ... ಭೂಮಿಯಲ್ಲಿ ದುಡಿದರೂ ಅಂಗೈಯಗಲ... ಹೊಟ್ಟೆಗೆ ಹಿಟ್ಟಿಲ್ಲದೆ ಬೋಧಗಯಾ ಸುತ್ತ... ಸುಮಾರು 62 ಗ್ರಾಮಗಳ ದಲಿತರು ತ... ದುಡಿಮೆಗೆ ತಕ್ಕ ಕೂಲಿ ಮತ್ತು ನ್ಯಾಯವ... ಬರಬೇಕಾದ ಫಸಲಿನ ಹಂಚಿಕೆಗೆ ಪೂಜಾರಿ... ವಿರುದ್ಧ ಹೋರಾಟಕ್ಕಿಳಿದಿದ್ದಾರೆ.

ಇತ್ತೀಚೆಗೆ ಈ ಬೇಡಿಕೆ ಮುಂದಿಟ್ಟು ನ್ಯಾ... ಕ್ಕಾಗಿ ಆಗ್ರಹಪಡಿಸಿದ ಅನೇಕ ದಲಿತರ... ಮಠದ ಪೂಜಾರಿಯೊಬ್ಬ ಹಾಡುಹಗಲೇ ಸಾ... ನಿಲ್ಲಿಸಿ ಅವರ ಕೈಗಳಿಗೆ ಹಗ್ಗಕಟ್ಟಿಸಿ ಬಂದ... ಧಾರಿಯೊಡನೆ ಕರೆದೊಯ್ದು ಚಿತ್ರಹಿಂಸೆಗೆ ... ಪಡಿಸಿದ. ಕುರುಡು ಬಿಹಾರಕ್ಕೆ ಈ ಘೋರ ಹ... ಕಾಣಲಿಲ್ಲವಾದರೂ ದಲಿತೋದ್ಧಾರದ ... ಜಪಮಾಡುವ ಇಂದಿರಾಣಿಗೆ ಕಾಣದೇ ಹೋ... ದರ ಬಗ್ಗೆ ದಲಿತರು ಇನ್ನಾದರೂ ಗಂಭ... ವಾಗಿ ಚಿಂತಿಸಬೇಕಾಗಿದೆ.

ಮುಖ್ಯಮಂತ್ರಿ ಮನೆ ಮುಂದೆ ಡಿಯಸೆಸ್ ಪ್ರದರ್ಶನ

ವರದಿ : ಮುನಿಶಂಕರ

ಭೂಮಾಲೀಕರ ಮತ್ತು ಶೋಷಕ ಸವರ್ಣೀಯರ ನಿರಂತರ ಕಿರುಕುಳದ ಬಗ್ಗೆ ಪದೇ ಪದೇ ರಕ್ಷಣೆಗಾಗಿ ಕಾಡಿ ಬೇಡಿಕೊಂಡರೂ ಕಣ್ಣು ತೆರೆಯದ ಪೋಲೀಸು ಮತ್ತು ತಹಸೀಲ್ದಾರರ ನಿರ್ಲಕ್ಷತೆ ವಿರೋಧಿಸಿ ದೊಡ್ಡಬಳ್ಳಾಪುರ ತಾಲ್ಲೂಕಿನ ದಲಿತರು ಮುಖ್ಯಮಂತ್ರಿ ಮನೆ ಮುಂದೆ ಡಿ-25 ರಂದು ಸುಮಾರು ಎರಡು ಗಂಟೆಗಳ ಕಾಲ ಘೋಷಣೆ ಹಾಕುತ್ತ ಪ್ರತಿಭಟನೆ ನಡೆಸಿದರು.

ತಮ್ಮ ಜಮೀನಿನಲ್ಲಿ ತಾವು ರಕ್ತ ಬೆವರು ಸುರಿಸಿ ಬೆಳೆದ ಬೆಳೆಯನ್ನು ಸವರ್ಣೀಯರು ಕೊಯ್ದು ಕೊಂಡುಹೋದದ್ದು. ಮಂಜೂರಾದ ಜಮೀನನ್ನು ತಾಲ್ಲೂಕು ಬೋರ್ಡ್ ಅಧ್ಯಕ್ಷ ತನ್ನ ಸಂಬಂಧಿಕನ ಹೆಸರಿಗೆ ಮಾಡಿಸಿಕೊಂಡ ಬಗ್ಗೆ ಹೈಕೋರ್ಟಿನಿಂದ ತಡೆಯಾಜ್ಞೆ ತಂದರೂ ಬೆಳೆದ ಬೆಳೆ ಕೊಯ್ಯಲು ವಿನಾಕಾರಣ ಸವರ್ಣೀಯರ ತಡೆ ಮತ್ತು ಈ ಬಗೆಗಿನ ಪೋಲೀಸ್ ನಿಷ್ಕ್ರಿಯತೆ, ಭೂಮಾಲೀಕರಿಂದ ಕೊಲೆ ಬೆದರಿಕೆ ಮುಂತಾದ ಅನ್ಯಾಯಗಳ ಬಗ್ಗೆ ಐಜಿಪಿವರೆಗೆ ಅನೇಕ ಮನವಿ ಮಾಡಿಕೊಂಡರೂ ನ್ಯಾಯ ಸಿಗದ ಕಾರಣ ಮುಖ್ಯಮಂತ್ರಿಯನ್ನೇ ರಕ್ಷಣೆಗಾಗಿ ನೇರವಾಗಿ ಆಗ್ರಹ ಪಡಿಸಲಾಯಿತು.

"ಜೋರ್‌ಸೆ ಬೋಲೋ ಪ್ಯಾರ್‌ಸೆ ಬೋಲೋ ಡಿಯಸೆಸ್ ಜಿಂದಾಬಾದ್", "ದಲಿತರಿಗೆ ರಕ್ಷಣೆ ಕೊಡದ ಸರ್ಕಾರಕ್ಕೆ ಧಿಕ್ಕಾರ" "ದಲಿತರಿಗೆ ರಕ್ಷಣೆ ಕೊಡಿ ಇಲ್ಲವೆ ಸೀಟು ಬಿಡಿ" ಮುಂತಾದ ಗುಡುಗು ಮಿಂಚಿನ ಘೋಷಣೆಗಳೊಡನೆ ದಲಿತ ಸಂಘರ್ಷ ಸಮಿತಿ ಬ್ಯಾನರ್ ಹಿಡಿದ ಕಾರ್ಯಕರ್ತರು ಮತ್ತು ದೊಡ್ಡಬಳ್ಳಾಪುರ ತಾಲ್ಲೂಕಿನ ಅನೇಕ ಗ್ರಾಮಗಳ ದಲಿತರು ಮುಖ್ಯಮಂತ್ರಿ ಮನೆ ಮುಂದೆ ಹೋಗಿ ನ್ಯಾಯಕ್ಕಾಗಿ ಒತ್ತಾಯಿಸಿದರು.

"ಅಯ್ಯೋ ಗಲಾಟೆ ಮಾಡಬೇಡಿ-ನಿಮ್ಮನ್ನ ಇಲ್ಲಿವರೆಗೆ ಬಿಟ್ಟಿದ್ದೇ ಹೆಚ್ಚು" ಎಂದು ಮುಖ್ಯಮಂತ್ರಿಗಳ ಅಧಿಕಾರಿಗಳು ಪೋಲೀಸ್ ಅಧಿಕಾರಿಗಳು ಆಗಾಗ್ಗೆ ಬಂದು ದಲಿತರ ಬಾಯಿ ಮುಚ್ಚಿಸಲು ವಿಫಲಗೊಂಡು ಕೈಕೈ ಹಿಸುಕಿಕೊಂಡು ಓಡಾಡುತ್ತಿದ್ದರು. ಈ ನಡುವೆ ಮುಖ್ಯಮಂತ್ರಿ ಮನೆಗೆ ಬಂದಿದ್ದ ಐಜಿಪಿ ನಿಮ್ಮ ಸಮಸ್ಯೆಗಳತ್ತ ಗಮನ ಹರಿಸಿ ಈ ಕೂಡಲೇ ಪೋಲೀಸ್ ಕಳುಹಿಸಿ ಕೊಡುವುದಾಗಿ ದಲಿತರನ್ನು ಸಂತೈಸಲು ಯತ್ನಿಸಿದ ಅವರಿಗೆ "ನಾವೀಗ ಇಲ್ಲಿಗೆ ಬಂದಿರೋದು ನಿಮ್ಮ ಹತ್ರ ಈ ಮಾತ್ ಕೇಳೋಕ್ಕಲ್ಲ; ಮುಖ್ಯಮಂತ್ರಿ ನೋಡೋಕೆ" ಎಂದು ಕಾರ್ಯಕರ್ತರು ನೇರವಾಗಿ ಉತ್ತರಕೊಟ್ಟು ಅವರನ್ನು ಸುಮ್ಮನಿರಿಸಿದರು.

ಈ ಮಧ್ಯೆ ಪ್ರತಿಷ್ಠಿತ ಕ್ರಿಶ್ಚಿಯನ್ನರು ಬಂದು ಕ್ರಿಸ್‌ಮಸ್ ಶುಭಾಶಯ ಹೇಳಿ ಕೈ ಕುಲುಕಿ ಹೋಗುತ್ತಿದ್ದರೂ ವೈದ್ಯಕೀಯ ಕಾಲೇಜು ಸ್ಥಾಪನೆ ವಿವಾದದ ಬಗೆಗಿನ ಚರ್ಚೆಯಲ್ಲಿ ವೈದ್ಯ ವಿದ್ಯಾರ್ಥಿಗಳ ಜತೆಗೆ ಗುಂಡೂರಾವ್ ಮೊಂಡುತನ ಹಿಡಿದಿದ್ದರಿಂದ ಗಂಟೆಗಳು ಉರುಳುತ್ತಿದ್ದವು. ಬಿಸಿಲಿನ ಬೇಗೆಯಲ್ಲೂ ಸತತ ಘೋಷಣೆ ಹಾಕುತ್ತಿದ್ದ ಕಾರ್ಯಕರ್ತರಿಗೆ ಮುಖ್ಯಮಂತ್ರಿ ಕಾಣಲು ಗೇಟಿನ ಹೊರಗೆ ನಿಂತು ಬಂದು ಹೋಗುವವರಿಗೆಲ್ಲ ತಲೆಬಾಗಿ ಕೈಮುಗಿದು ಹಲ್ಲು ಗಿಂಜುತ್ತಿದ್ದ ಕಾಂಗ್ರೆ ಹರಿಜನ ಸೆಲ್‌ನ ಪಾಲ್ಕರು ಪುಢಾರಿಗಳ ವರ್ತನೆ ನಗೆ-ಗೇಲಿಯ ವಸ್ತುವಾಗಿತ್ತು, ಜತೆಗೆ ಕ್ಯಾಕರಿಸಿ ಅವರತ್ತ ಉಗುಳುವಂತಿತ್ತು.

ಮುಖ್ಯಮಂತ್ರಿ ಗುಂಡೂರಾವ್ ಕೊನೆಗೆ ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರ ಪಟ್ಟಿಗೆ ಜಗ್ಗಿ ಅವರನ್ನು ಕರೆಸಿ ಮಾತನಾಡಿ ಕಿರುಕುಳ ನೀಡಲಾಗುತ್ತಿದ್ದ ಗ್ರಾಮಗಳಿಗೆ ಪೋಲೀಸ್ ಕಳುಹಿಸಲು ಜತೆಯಲ್ಲಿದ್ದ ಐಜಿಪಿಗೆ ಆಜ್ಞೆ ಮಾಡಿದರು. ಈ ಮುಂಚೆ ಮುಖ್ಯಮಂತ್ರಿ ಬಳಿ ಕರೆದುಕೊಂಡು ಹೋಗಿ ನಿಮ್ಮ ಬೇಡಿಕೆ ಈಡೇರಿಸಿ ಕೊಡುವುದಾಗಿ ಡಿಯಸೆಸ್ ಕಾರ್ಯಕರ್ತರನ್ನು ಕೇಳಿ ಬೈಗುಳ ತಿಂದಿದ್ದ ಕಾಂಗ್ರೆ ಹರಿಜನ ಸೆಲ್ ಪುಢಾರಿಗಳು ತಮ್ಮ ನಾಯಕ ಗುಂಡೂರಾವ್ ದರ್ಶನ ಕಾಣದೆ ಇನ್ನೂ ಬಂದು ಹೋಗುವವರಿಗೆ ಸಲಾಂ ಹೊಡೆಯುತ್ತಲೆ ಇದ್ದದ್ದು ಕಾರ್ಯಕರ್ತರಿಗೆ ರಸ್ತೆಯುದ್ದಕ್ಕೂ ಜೋಕಾಯಿತು.

ಎರಡು ಕಡೆ ದಲಿತರಿಬ್ಬರ ಭೀಕರ ಕೊಲೆ

[ಪಂಚಮ ಪ್ರತಿನಿಧಿಯಿಂದ]

ಸೋಮವಾರ ಪೇಟೆಯ ಶಾಂತಳ್ಳಿ ಬಳಿ ಕೇರಳದ ಜೋಸೆಫ್ ಮೈಕಿಲ್ ಅಂಡ್ ಬ್ರದರ್ಸ್ ಕಂಪೆನಿಯ ಜೋಯರ್ ಎಂಬಾತನು ಕಳೆದ ನವೆಂಬರ್ 22ರಂದು ಕೂಲಿಗಾರ ದಲಿತ ಪುಟ್ಟಯ್ಯ ಮತ್ತು ಶಾಂತಳ್ಳಿ ಗ್ರಾಮಪಂಚಾಯಿತಿ ಅಧ್ಯಕ್ಷ ಕೆ. ಕೆ. ಅಪ್ಪಯ್ಯ ಎಂಬುವವರನ್ನು ಚೂರಿಯಿಂದ ಇರಿದು ಕೊಂದಿರುವುದಾಗಿ ವರದಿಯಾಗಿದೆ.

ಪುಟ್ಟಯ್ಯ ಕೂಲಿ ಮುಗಿಸಿಕೊಂಡು ಮನೆಗೆ ವಾಪಸ್ ಆಗುತ್ತಿದ್ದಾಗ ಜೋಯರ್ ಪುಟ್ಟಯ್ಯನನ್ನು ಅಡ್ಡಗಟ್ಟಿ ಕಳ್ಳಬಟ್ಟಿ ದೊರೆಯುವ ಜಾಗ ತೋರಿಸಬೇಕೆಂದು ಒತ್ತಾಯಿಸಿದಾಗ ಘರ್ಷಣೆ ಉಂಟಾಯಿತೆಂದು, ಕುಪಿತಗೊಂಡ ಜೋಯರ್ ಚೂರಿಯಿಂದ ಪುಟ್ಟಯ್ಯನಿಗೆ ಇರಿದನೆಂದು ಹೇಳಲಾಗಿದೆ.

ಇನ್ನೊಂದು ಕೊಲೆ

ಮಳವಳ್ಳಿಯ ಹೆಂಡದ ಅಂಗಡಿಯೊಂದರಲ್ಲಿ ದಲಿತ ಶಿಕ್ಷಕರೊಬ್ಬರನ್ನು ಡಿಸೆಂಬರ್ 26ರಂದು ಅಮಾನುಷವಾಗಿ ಹೊಡೆದು ಬಡಿದು ಕೊಂದಿರುವ ಘಟನೆ ನಡೆದಿದೆ.

ಮಳವಳ್ಳಿ ತಾಲ್ಲೂಕು ರಾವಣಿ ಗ್ರಾಮದ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದ ನಂಜುಂಡಯ್ಯ, ಅವರು ಹೆಂಡ ಕುಡಿಯಲು ಹೋಗಿದ್ದರೆಂದು, ಅಂದು ಅವರ ಜೇಬಿನಲ್ಲಿ ಸಾಕಷ್ಟು ಹಣ ಇತ್ತೆಂದು ಹೇಳಲಾಗಿದೆ. ನಂಜುಂಡಯ್ಯ ಅವರ ತಲೆ ಮೇಲೆ ಕಬ್ಬಿಣದ ಸಲಾಕಿಯಿಂದ ಬಲವಾಗಿ ಹೊಡೆದು ಗಾಯಗೊಳಿಸಿದ್ದ ಗುರುತುಗಳಿದ್ದವು.

ಪೋಲೀಸರು ಈ ಕೊಲೆ ಪ್ರಕರಣವನ್ನು ದಾಖಲು ಮಾಡಿಕೊಂಡು ಕೊಲೆಗಡುಕರ ಪತ್ತೆಗಾಗಿ ನಾಯಿಗಳನ್ನು ಬಿಟ್ಟಿದ್ದಾಗ, ಅವು ಹೆಂಡದಂಗಡಿಯವರ ಮನೆಯನ್ನೇ ಸುತ್ತುವರಿದರೂ ಈವರೆಗೆ ಪೋಲೀಸರು ಯಾರನ್ನೂ ಬಂಧಿಸಿಲ್ಲ.

ಬಲಾಢ್ಯ ಭೂದಾಹಿಗಳಿಂದ ೭೦ ಗುಡಿಸಲ

ಕೋಲಾರ ಜಿಲ್ಲೆ ಭೂಮಾಲೀಕ ಕಟುಕರ ಕ್ರೌರ್ಯದಿಂದ ಕಸಾಯಿಖಾನೆಯಾಗಿ ಪರಿವರ್ತನೆಯಾಗಿದೆ. ಅಸಹಾಯಕ ದಲಿತರು ಬಲಿಪಶುಗಳಾಗಿದ್ದಾರೆ. ದಿನನಿತ್ಯ ದಲಿತರ ಮೇಲೆ ದೌರ್ಜನ್ಯ ಹಿಂಸೆ ಕಿರುಕುಳ ಸರ್ವೇಸಾಮಾನ್ಯವಾದ ಸಂಗತಿಯಾಗಿದೆ. ಇತ್ತೀಚೆಗೆ ಶ್ರೀನಿವಾಸಪುರ ತಾಲ್ಲೂಕು ರಾಯಲ್‌ಪಾಡ್ ಹೋಬಳಿಯ 12 ಹಳ್ಳಿಗಳ ದಲಿತರು ಬೀಳುಬಿದ್ದಿದ್ದ ಕಾಡುಭೂಮಿಯನ್ನು ಹಸನುಮಾಡಿ ಗುಡಿಸಲು ಹಾಕಿ ಬದುಕುತ್ತಿದ್ದರು. ಈ ದಲಿತರ 70 ಗುಡಿಸಲುಗಳು ಇಂದು ಬಲಾಢ್ಯರ ಬಂದೂಕ - ಬೆಂಕಿಗೆ ಸಿಕ್ಕಿ ಉರಿದು ಬೂದಿಯಾಗಿವೆ.

ಶ್ರೀನಿವಾಸಪುರ ತಾಲ್ಲೂಕಿನ ರಾಯಲ್‌ಪಾಡ್ ಹೋಬಳಿ ಬೆಟ್ಟಗುಡ್ಡಗಳಿಂದ ಚೆಲ್ಲಿಕೊಂಡು ವ್ಯವಸಾಯಕ್ಕೆ ಯೋಗ್ಯವಾಗಿಲ್ಲ. ಇಲ್ಲೊಂದು "ತಲಕಾಯಲ್ಲಕೊಂಡ" [ತಲೆಬುರುಡೆ ಬೆಟ್ಟ] ಅನ್ನುವ ಬೆಟ್ಟ ಇದೆ. ಇಲ್ಲಿ ಹಿಂದೆ ಯಾರಾರೋ ಕೊಲೆಯಾದವರ ತಲೆಬುರುಡೆಗಳ ಅವಶೇಷಗಳು ಇಂದಿಗೂ ಇವೆಯಂತೆ. ಇಲ್ಲಿಯ ಭೂಮಾಲೀಕರ ಇಂದಿನ ಕ್ರೌರ್ಯ ಕಂಡರೆ ಇದು ನಿಜವೆನಿಸುತ್ತದೆ. ಈ ಬೆಟ್ಟಗುಡ್ಡಗಳ ನಡುವಿನ ನೀರಿನಾಸರೆಯ ತಪ್ಪಲುಗಳು ರೆಡ್ಡಿಗಳ ಕೈಯಲ್ಲಿವೆ. ಇವರಲ್ಲಿ ಅನೇಕರು ಹತ್ತಾರು ಖಾಸಗಿ ಬಸ್ಸುಗಳ ಮಾಲೀಕರು ಇದ್ದಾರೆ. ಹಾಗಾಗಿ ಇಡೀ ಹೋಬಳಿ ಅಷ್ಟೇ ಏಕೆ ತಾಲ್ಲೂಕು ತುಂಬ ಇವರ ಪ್ರಾಬಲ್ಯದ ಜಾಲ ಹರಡಿಕೊಂಡಿದೆ. ಇಲ್ಲಿಯ ಎಲ್ಲ ರಾಜಕೀಯ ಪಕ್ಷಗಳು ಕೂಡ ಇವರ ಗುತ್ತಿಗೆಯಾಗಿವೆ. ಗುಂಪು ರಾಜಕೀಯ, ಹಲ್ಲೆ, ಘರ್ಷಣೆ, ಪಿತೂರಿ, ದ್ವೇಷ ನಿತ್ಯದ ಪ್ರತಿಷ್ಠೆಯ ಕ್ರೀಡೆಗಳಾಗಿ, ಕಾದಾಟದ ಕಣದಲ್ಲಿ ದಲಿತರ ಬದುಕು ನಜ್ಜುಗುಜ್ಜಾಗಿ ದಿಕ್ಕಾಪಾಲಾಗಿದೆ.

ಭೂಗ್ರಹಣ-ಉಳ್ಳವರಿಗೆ ಗ್ರಹಣ

ಈ ತಾಲ್ಲೂಕಿನ ಹಲವು ಭಾಗಗಳಲ್ಲಿ ಸರ್ಕಾರ ಕಾಡು ಬೆಳೆಸಲು ನೂರಾರು ಎಕರೆ ಭೂಮಿ ಕಾದಿಟ್ಟಿದೆ. ಕಾದಿಟ್ಟ ಕಡೆ ಸರ್ಕಾರ ಇದುವರೆಗೂ ಕಾಡು ಬೆಳೆಸದಿರುವುದರಿಂದ ಶ್ರೀಮಂತ ರೈತರು ಬಹಳಷ್ಟು ಭೂಮಿಯನ್ನು ಆಕ್ರಮಿಸಿ ಒತ್ತುವರಿ ಮಾಡಿಕೊಂಡಿದ್ದಾರೆ. ಇನ್ನುಳಿದದ್ದು ಕೂಡ ಬಡವರಿಗೆ ದಕ್ಕುವುದಿಲ್ಲವೆಂದು ತಿಳಿದ ಜಿಲ್ಲಾ ರೈತಸಂಘ ಅಕ್ಟೋಬರ್ ತಿಂಗಳಲ್ಲಿ ಹಲವು ಕಡೆ ಭೂಗ್ರಹಣ ಚಳುವಳಿ ನಡೆಸಿತು. ಬಂಜರು ಬಿದ್ದಿದ್ದ ಕಾಡುಭೂಮಿಯನ್ನು ಭೂಹೀನರು ಆಕ್ರಮಿಸಿಕೊಂಡರು. ಈ ಭೂಗ್ರಹಣದಿಂದಉಳ್ಳವರ ಪ್ರತಿಷ್ಠೆಗೆ ಗ್ರಹಣ ಹಿಡಿದಂತಾಯಿತು.

ಗುಡಿಸಲು ನಿರ್ಮಾಣ-ಭೂಮಿಗಾಗಿ ಹೋರಾಟ

ಈ ಚಳುವಳಿ ಭೂಹೀನರ ಬಹುದಿನದ ಆಸೆಗಳನ್ನು ಚಿಗುರಿಸಿತು. ಅಂಗೈಯಗಲ ನೆಲದ ಒಡೆತನ, ಸ್ವತಂತ್ರ ಬದುಕು ಹಂಬಲಿಸಿ ಈ ಈ ಹೋಬಳಿಯ 12 ಹಳ್ಳಿಗಳ ಭೂಹೀನರು 'ಬಂಡ್ರೆ ಜಿಡ್ಡು' ಕಾಡುಪ್ರದೇಶದಲ್ಲಿ ಸಾಮೂಹಿಕವಾಗಿ ಗಿಡ ಕಡಿದು ಸಾಲ ತಂದು ಹುರುಳಿ



ಛಲದಿಂದ ಬದುಕುತ್ತೇವೆ ಎಂದು ಮತ್ತೆ ಕಟ್ಟಲಾಗುತ್ತಿರುವ ಜೋಪಡಿ

ಚೆಲ್ಲಿದರು. ನೆಲ ತಮ್ಮದಾಗುವುದೆಂಬ ... ಯಿಂದ ಬದಿಯಲ್ಲೇ ಸೊಪ್ಪುಸೊದೆ ಹೇ... ಗೂಡು ಕಟ್ಟಿಕೊಂಡರು. ಹಸಿರಿರದ ... ಯೊಂದು ಬೆಳೆಯತೊಡಗಿತು.

ಕಿರುಕುಳಗಳ ಸರಮಾಲೆ

ತಮ್ಮ ಪ್ರಾಬಲ್ಯದ ಬಲೆ ಬಿಡಿಸಿಕೊಂಡು ... ತ್ರರಾದ ಇವರನ್ನು ಕಂಡು ತಿಮ್ಮನಪಲ್ಲಿ, ... ಗುಂಟನಪಲ್ಲಿ, ಬಯ್ಯಪಲ್ಲಿಯ ಬಲಾಢ... ಕಣ್ಣು ಕೆಂಪಾಯಿತು. ಈ ನಿರ್ಗತಿಕ... ಕೂಡಲೇ ಓಡಿಸದಿದ್ದರೆ ಕಂಟಕ ಕಾದಿಟ್ಟದ್ದ... ಬಗೆದು, ಅರಣ್ಯ ಇಲಾಖೆಯ 'ಭ್ರಷ್ಟ' ಸಿ... ದಿಯೊಂದಿಗೆ ಕೂಡಿಕೊಂಡು ಬಗೆಬಗೆಯ ... ಕುಳ ಕೊಡತೊಡಗಿದರು. ಇದಕ್ಕೆ ಇನ್ನೊ... ಬಲವಾದ ಕಾರಣವೆಂದರೆ ಬಂಡ್ರೆ ಒಡ್ಡು... ಬದಿಯಲ್ಲಿ 14 ಲಕ್ಷ ರೂ.ಗಳ ಒಡ್ಡು ನಿ... ಣದ ಯೋಜನೆ ರೂಪುಗೊಳ್ಳುತ್ತಿರುವು... ಅದಾದರೆ ಈ ನಿರ್ಗತಿಕರ ಭೂಮಿ ಲ... ತರ ರೂ.ಗಳ ಬೆಲೆ ಬಾಳುತ್ತದೆ.

ಬೆಳೆನಾಶ; ಕೊಲೆಬೆದರಿಕೆ

ಬೆಳೆದುನಿಂತ ಹುರುಳಿ ಹೊಲವನ್ನು ... ಮಂದಿ ದಂಡೊಂದು ಮಚ್ಚು, ದೊಣ್ಣೆ ಸಮೇ... ಬಂದು ತಮಟೆ ಬಡಿಯುತ್ತಾ ದನ ... ಹಿಂಡುಬಿಟ್ಟು ಮೇಯಿಸಿದರು. ದಲಿ... ಪೋಲೀಸರಿಗೆ ದೂರು ನೀಡಿದರು. ... ರನ್ನು ಠಾಣೆಗೆ ಕರೆಸಿಕೊಂಡ ರಾಯಲ್‌ಪಾ... ಇನ್ಸ್‌ಪೆಕ್ಟರ್ "ಜಮೀನು ನಿಮಗೆ ಆಗ... ಗುಡಿಸಲು ಬಿಟ್ಟು ಹೊರಟುಹೋಗಿ" ಎ... ಬೆದರಿಸಿದರು. ಠಾಣೆಯ ಮುಂದೆಯೇ ಬಂ... ರೆಡ್ಡಿ "ಸಾಲಾಗಿ ನಿಲ್ಸಿ ಬಂದೂಕಲ್ಲಿ ಸುಡ... ನೀವೇನ್ ಕಿತ್ತುಕೊಳ್ತೀರೋ ಕಿತ್ಕೊಳ್ಳಿ" ಎ... ಘೋಷಿಸಿದ.

ಇದಕ್ಕೆ ಜಗ್ಗದ ದಲಿತರು ರೈತಸಂಘದ ಬ... ಲದಿಂದ ಭೂಮಿಗಾಗಿ ಹೋರಾಟ ಮುಂದ... ರೆಸಿದರು. ಅರಣ್ಯ ಇಲಾಖೆಯ ಸಿಬ್ಬ... ಬಯ್ಯಾರೆಡ್ಡಿ, ರಾಮರೆಡ್ಡಿ, ಆಗಾಗ ಬ... ಬೆದರಿಸುವುದು, ಗುಡಿಸಲು ಕೀಳುವುದು ಮಾ... ತ್ತಿದ್ದರು.

ರೆಂಕಿ : ದಿಕ್ಕೆಟ್ಟ ದಲಿತರ ಅರಣ್ಯರೋಧನ

ಆರೋಪ

ಓಡಿಸುವ ತಂತ್ರಗಳು ಕೊಪುಗೊಳ್ಳ
ದ್ದವು. ಅರಣ್ಯ ಇಲಾಖೆಯ ಸಿಬ್ಬಂದಿ
ಯಣ್ಣಾರೆಡ್ಡಿ ಇಲಾಖೆಗೆ ಸೇರಿದ ನೀಲಗಿ
ಡಿಸಿ ಅದರ ಆರೋಪವನ್ನು ಇವರ
ಹಾಕಿ ಪೋಲೀಸಿಗೆ ದೂರು ನೀಡಿದ.
ವಶಪಡಿಸಿಕೊಂಡ ಪೋಲೀ
ಯಣ್ಣಾರೆಡ್ಡಿಯ ಸುಪರ್ದಿಯಲ್ಲೇ ಬಿಟ್ಟು
. ದೂರು ದಾಖಲಾಯಿತು.

ದಿನ

ದಲಿತರ ಪಾಲಿಗೆ ಕರಾಳ ದಿನ. ಅಂದು
ರಿನಲ್ಲಿ ನಡೆಯಲಿದ್ದ ರೈತರ ಬೃಹತ್
ಲ್ಲಿ ಭಾಗವಹಿಸಲು ಹೋದರು. ಆ
ಕೊಂಪೆಯಲ್ಲಿ ಉಳಿದವರು ತಿಮ್ಮಕ್ಕ,
, ಕದಿರಮ್ಮ, ವೆಂಕಟಮ್ಮ, ವೆಂಕ
ಈ ಐವರು ಮಾತ್ರ.

○ ಕೆ. ರಾಮಯ್ಯ
ಗಳು : ಎ. ಟಿ. ಶ್ರೀನಿವಾಸ್

ಗಂಟೆ ಸುಮಾರಿಗೆ ಅರಣ್ಯ ಇಲಾ
ಗಾರ್ಡ್ ರಾಮಯ್ಯ, ಬಯಣ್ಣಾರೆಡ್ಡಿ
ಹತ್ತು ಮಂದಿ ಸಿಬ್ಬಂದಿ ಬಂದು ಒಂದೆ
ಡಿಸಲು ಕೆಡವಿ ಹೊರಟುಹೋಗು
ದರಿಸಿ ಹೋದರು.

ಕ್ಕಿದ್ದ ಹಿಟ್ಟಿನಿಂದ ಸಂಜೆ ಗಂಜಿ ಕಾಯಿಸಿ
ತ್ತಿರುವಾಗ ಬ್ಯಾಟರಿ ಮತ್ತು ಪಂಜು
ಗುಂಪೊಂದು ಬರುತ್ತಿತ್ತು. ಬಂದ
ಮುಖಂಡ ಬಂದೂಕಧಾರಿ ಬಯಣ್ಣಾ
ಡಿಸಲಿಂದ ಆಚೆ ಬರುವಂತೆ ಅಬ್ಬರಿ
ಹೆದರಿ ಅವಿತುಕೊಂಡ ಹೆಂಗಸರನ್ನು
ಕೊರಗೆಳೆದು ಬಿಟ್ಟರು. ಹರೆ, ಸನಿಕೆ
ಲು, ಕೋಳಿ ಸಿಕ್ಕಿದೆಲ್ಲಾ ದೋಚಿ
ವ ಡಿಕೆಡಿಕೆ ಎಲ್ಲ ಪುಡಿಮಾಡಿ ಗುಡಿ
ಗೂ ಬೆಂಕಿ ಹಚ್ಚಿದರು. "ಇನ್ನೊಮ್ಮೆ
ಹಾಕಿದರೆ ನಿಮ್ಮನ್ನೂ ಸೇರಿಸಿ
ಅಂತ ಬೆದರಿಸಿ ಕುಣಿದು ಕುಪ್ಪಳಿ
ಸುತ್ತಾ ಹೋದರು. ಸೊಪ್ಪುಸೊದೆ ಹಾಕಿ ಕಟ್ಟಿಕೊಂಡಿದ್ದ ಸರ್ವಸ್ವ ಆಗಿದ್ದ ತಮ್ಮ ಗುಡಿಸಲುಗಳು ಕಣ್ಮುಂದೆ ಉರಿದು ಬೂದಿಯಾಗುವುದನ್ನು ಕಂಡು ಮಮ್ಮಲು ಮರುಗುತ್ತಾ ಕಣ್ಣೀರು ಹರಿಸಿದರು.

ನಂತರದ ಕಥೆ

ನೆಲೆ ಉರಿದು ಬೂದಿಯಾದರೂ ಇವರ ಬದುಕುವ ಆಸೆ ಛಲ ಬೂದಿಯಾಗಿಲ್ಲ. ಮತ್ತೆ ಗುಡಿಸಲು ಕಟ್ಟಿ ತಳಊರಿದ್ದಾರೆ. "ನಮ್ಮನ್ನು ಗುಂಡುಹಾಕಿ ಸುಟ್ಟರೂ ನಾವು ಇಲ್ಲಿಂದ ಕದಲೋಲ್ಲ" ಎಂದು ಪಣ ತೊಟ್ಟಿದ್ದಾರೆ.

ಪತ್ರಿಕೆಗಳಲ್ಲಿ ಈ ದೌರ್ಜನ್ಯ ಬೆಳಕುಕಂಡ ನಂತರ ಕಾಗೋಡು ತಿಮ್ಮಪ್ಪ, ರೇಣುಕಾ ರಾಜೇಂದ್ರನ್, ಮಲ್ಲಿಕಾರ್ಜುನಖರ್ಗೆ, ವೆಂಕಟರಮಣ ಇತ್ಯಾದಿ ಸಚಿವರ ದಂಡೇ ಬಂದು ಹೋಗಿದೆ. ಆದರೆ ಈ ನಿರ್ಗತಿಕರಿಗೆ ಮಾತ್ರ ಚೂರು ಪರಿಹಾರ ಸಿಕ್ಕಿಲ್ಲ. ಬಲಾತ್ಕಾರ ಬಂಧನವಾಗಿಲ್ಲ. ಇದು ದಲಿತರನ್ನು ಕಂಗೆಡಿಸಿದೆ. ಈ ನಿರ್ಲಕ್ಷ್ಯ, ದೌರ್ಜನ್ಯಗಾರಿಕೆಗೆ ಪ್ರಚೋದಕವಾಗಿದೆ.

ತಿಮ್ಮನಪಲ್ಲಿಯ ಬಯಣ್ಣಾರೆಡ್ಡಿ, ರಾಮರೆಡ್ಡಿ, ಮುದ್ರಪಲ್ಲಿಯ ತಿಮ್ಮೆಗೌಡ, ಇವರೆಲ್ಲಾ ಮತ್ತೊಮ್ಮೆ ಧಾಳಿ ನಡೆಸುವ ಹವಣಿಕೆಯಲ್ಲಿದ್ದಾರೆ. "ಬಂದ್ರೆಒಡ್ಡುವಿನಲ್ಲಿ ಮೊಲಗಳ ಹಾವಳಿ ಜಾಸ್ತಿಯಾಗಿದೆ ಇಷ್ಟರಲ್ಲೇ ಬೇಟೆಗೆ ಬರ್ತೀವಿ" ಎನ್ನುವುದಾಗಿ ಸವಾಲು ಹಾಕಿದ್ದಾರೆ. ತಿಮ್ಮನಪಲ್ಲಿ, ಬಯ್ಯಪಲ್ಲಿ, ಭೀಮಗಾಂಟನಪಲ್ಲಿಯಲ್ಲಿ ಬಹಳಷ್ಟು ಮಂದಿ ಭೂಹೀನರಿದ್ದಾರೆ. ಅವರಿಗೂ ಕೂಡ ಇವರ ಜತೆ ಸೇರುವ ಬಲವಾದ ಇಚ್ಛೆ ಇದೆ. ಆದರೆ ಅವರನ್ನು ಈ ಬಲಾಢ್ಯರು ತುಳಿದಿಟ್ಟು ನಿಯಂತ್ರಿಸುತ್ತಿದ್ದಾರೆ. ಅವರಿಗೆ ಎದುರುನಿಂತು ಕಿರುಕುಳ ಅನುಭವಿಸುವ ಧೈರ್ಯವಿಲ್ಲದೆ ಆಸೆ ಅದುಮಿಕೊಂಡಿದ್ದಾರೆ.

ಹೊಂಚಿಕಾದ ಭೂಮಾಲೀಕರಂತೆ ಸುತ್ತುವರಿದ ಗುಡ್ಡಗಳ ನಡುವೆ ಕುಡಿಯಲು ನೀರು ಸಿಗದೆ, ತಿನ್ನಲು ಕೂಳಿರದೆ, ದುಡಿಯಲು ಕೂಲಿಇಲ್ಲದೆ, ಮೂಳೆಕೊರೆಯುವ ಚಳಿಯಲ್ಲಿ ಸೂರಿರದೆ ಬದುಕುತ್ತಿದ್ದಾರೆ ಈ ಜನ. ಸರ್ಕಾರ ಇವರಿಗೆ ಅನ್ನ, ವಸತಿ ಒದಗಿಸಲು ಇನ್ನೆಷ್ಟು ವರ್ಷಬೇಕೋ ?



"ಗುಂಡಿಕ್ಕಿದರೂ ಇಲ್ಲಿಂದ ಕದಲೋಲ್ಲ"

ಇದು ಇಲ್ಲಿಯ ನಿರ್ಗತಿಕ ದಲಿತ ರಾಮಯ್ಯನ ಛಲದ ನಿಲುವು. ನೆಲೆ ಕಳೆದುಕೊಂಡ 12 ಹಳ್ಳಿಗಳ ಭೂಹೀನರ ಮುಖಂಡ ಯೇಂಪಲ್ಲಿಯ 60 ವರ್ಷದ ಈ ರಾಮಯ್ಯ. ದಿಡ್ಡದೇಹ, ಕುರುಚಲಗಡ್ಡ, ಆಸೆದುಂಬಿದ ಕಣ್ಣುಗಳ ನೋವಿನ ಮುದ್ದೆಯಾದ, ಈತನ ಎದೆಯಲ್ಲಿ ಖಂಡುಗ ಕಿಚ್ಚಿದೆ. ಬತ್ತದರೊಚ್ಚಿದೆ.

10 ವರ್ಷದ ಬಾಲಕನಾಗಿದ್ದಾಗಿನಿಂದ ರೆಡ್ಡಿಗಳ ಹಟ್ಟಿಯಲ್ಲಿ ಜೀತಕ್ಕಿದ್ದು ಅನುಭವಿಸಿದ ಕಿಪ್ಪ ಕಾರ್ಪಣ್ಯ, ನೋವು ಬಿಚ್ಚಿಕೊಂಡು ಜ್ವಾಲಾಮುಖಿಯಾಗಿದೆ. ಇಂತಹ ಕೆರಳಿದ ರಾಮಯ್ಯನವರ ಸಿಟ್ಟಿನ ಜ್ವಾಲಾಮುಖಿಯಲ್ಲಿ ತುಳಿಯುತ್ತಾ ಮೆರೆದ ಪಾಳೆಯಗಾರರು ಸುಟ್ಟು ಬೂದಿಯಾಗುವುದು ಖಂಡಿತ ಎನಿಸುತ್ತದೆ.

"ರೆಡ್ಡಿರೆಡ್ಡಿಗಳ ನಡುವಣ ದ್ವೇಷದಿಂದ ನಾವು ಬೆಂದು ಕಾಡು ಸೇರಿದೆವು. ಏನಾಗುತ್ತದೋ ನೋಡುವಾ" ಎನ್ನುವ ರಾಮಯ್ಯ "ಹಳ್ಳಿಹಳ್ಳಿಗಳಲ್ಲಿ ಕೆಳಜಾತಿಯವರು ರೆಡ್ಡಿಗಳ ಕೈಕೆಗೆ ನಲುಗುತ್ತಿದ್ದಾರೆ. ಹೆಂಡಕೊಟ್ಟು ಓಟು ತಗೊಂಡೋರು ಅವರಿಗೆ ಸಪೋರ್ಟಾಗಿದ್ದಾರೆ ಈ ಸಾರಿ ಬರ್ಲಿ ಸಗಣೀಲಿ ಹೊಡೀತೀವಿ" ಎನ್ನುತ್ತಾನೆ.

ಬೈರಂಡಹಳ್ಳಿ ದಲಿತರ ಮೇಲೆ ನಿರಂತರ ಹಲ್ಲೆ

ವರದಿ : ಕೋದಂಡರಾಮು

ಸರ್ಕಾರ ಮತ್ತು ಎಚ್ಚೆತ್ತ ದಲಿತರು ಕೋಲಾರ ತಾಲ್ಲೂಕು ಬೈರಂಡಹಳ್ಳಿ ದಲಿತರ ರಕ್ಷಣೆ ಬಗ್ಗೆ ಸದಾ ನಿಗ ಇಡದಿದ್ದರೆ ಆ ಊರಿನ ದಲಿತರ ಕೊಲೆ-ಸುಲಿಗೆ ಯಾವ ಘಳಿಗೆಯಲ್ಲಾದರೂ ಆಗಬಹುದೆಂಬ ದಟ್ಟ ಭೀತಿ ವಾತಾವರಣ ಇದೆ.

1979ರ ಅಕ್ಟೋಬರ್‌ನಲ್ಲಿ ಕೆರೆಯ ದೀಪೋತ್ಸವಕ್ಕೆ ಕೋಣನ ಬಲಿಕೊಡಲು ದಲಿತರು ನಿರಾಕರಿಸಿದ್ದೇ ಸವರ್ಣೀಯರ ದ್ವೇಷ-ಹಗೆತನಕ್ಕೆ ಗುರಿಯಾಗಬೇಕಾಯಿತು.

ಅಂದಿನಿಂದ ದಲಿತರ ಮೇಲೆ ಸಾಮಾಜಿಕ ಬಹಿಷ್ಕಾರ ಜಾರಿಯಲ್ಲಿದ್ದು ದಲಿತರನ್ನು ಬದುಕಿನ ಎಲ್ಲ ರಂಗಗಳಲ್ಲೂ ಕೃತಕ ಹಿಂಸೆಗೆ ಗುರಿಪಡಿಸಲಾಗಿದೆ.

ದಲಿತರ ಬದುಕನ್ನು ಅತಂತರಗೊಳಿಸಿ ಸ್ವಪ್ರೇರಿತರಾಗಿ ಊರುಬಿಟ್ಟು ಹೊರಡುವಂತೆ ಮಾಡಬೇಕೆಂದು ಕಳೆದ ಮತ್ತು ಈ ವರ್ಷ ಅನೇಕ ದಲಿತರ ಹೊಲ ಗದ್ದೆಗಳ ಬೆಳೆಗಳನ್ನು ನಾಶಗೊಳಿಸಲಾಗಿದೆ.

ಈ ವರ್ಷ ಸುಮಾರು 10 ಸಾವಿರ ಬೆಲೆ ಬಾಳುವ ಅವರೆ, ಹಿಪ್ಪನೇರಳೆ ಸೊಪ್ಪು ಮತ್ತು ಬತ್ತದ ಬೆಳೆಯನ್ನು ಕದ್ದುಕೊಯ್ದುಕೊಂ ಹೋಗಲಾಗಿದೆ. ಇದರಿಂದಾಗಿ ಮೊದ ಮಳೆಯಿಲ್ಲದೆ ಅಭಾವಕ್ಕೆ ತುತ್ತಾಗಿರುವ ಪ್ರದೇಶದಲ್ಲಿ ದಲಿತರ ಸ್ಥಿತಿ ಮತ್ತಷ್ಟು ಸಂ ಕ್ಕೊಳಗಾಗಿದೆ.

ಸವರ್ಣೀಯರ ಈ ಬಗೆಯ ಅನೇಕ ಕಿರುಕು ಬಗ್ಗೆ ಸಂಬಂಧಿಸಿದ ಎಲ್ಲ ಅಧಿಕಾರಿ, ಮಂ ಶಾಸಕರಿಗೆ ಮನವಿ ಸಲ್ಲಿಸಿ ರಕ್ಷಣೆ ಕೋರಿಕೆ ಡಿದ್ದರೂ ಯಾವ ಭರವಸೆಯೂ ತಮ ಸಿಕ್ಕಿಲ್ಲವೆಂಬುದು ಬೈರಂಡಹಳ್ಳಿ ದಲಿ ಗೋಳು.

ಕಣ್ಣಾ ಮುಚ್ಚೆ ಕಾಡೇ ಗೂಡೇ

ಕಣ್ಣಾ ಮುಚ್ಚೆ ಕಾಡೇ ಗೂಡೇ
ಅವರನು ಬಿಟ್ಟು ಇವರಾರು?
ಇವರೇ ಅವರು ರಾಮ ಎಂಬುವರು
ಅವತಾರಪುರುಷರು, ಮಹಾವೀರರು,
ಸರ್ವಾಂತರ್ಯಾಮಿಗಳು, ಲೋಕ ಪೂಜಕರು
ಸಹೋದರನು ಗೆದ್ದ ವಧುವನ್ನು ವರಿಸಿದ ನೀತಿವಂತರು
ವಾಲಿಯನು ಮರೆಯಲಿ ನಿಂತು ಕೊಂದ ವೀರಾಧಿವೀರರು
ಕಳೆದುಕೊಂಡ ಹೆಂಡತಿಯನು ಹುಡುಕಲು,
ಸೇವಕನ ಮೊರೆಹೊಕ್ಕ ಸರ್ವಾಂತರ್ಯಾಮಿಗಳು
ಸಂಶಯ ಪಟ್ಟು ಹೆಂಡತಿಯ ಬಿಟ್ಟ ಲೋಕ ಪೂಜಕರು

॥ಕಣ್ಣಾ ಮುಚ್ಚೆ॥

ಇವರೇ ಅವರು ಕೃಷ್ಣ ಎಂಬುವರು
ಅವತಾರಪುರುಷರಲ್ಲಿ ಮತ್ತೊಬ್ಬರು
ಅನ್ಯಾಯಗಳ ನಾಶಕ್ಕೆ ಆಣೆ ಇಟ್ಟು, ಅವತಾರ ತೊಟ್ಟವರು
ಬಡಗೊಲ್ಲರ ಹದಿನಾರು ಸಾವಿರ ಹೆಂಡಂದಿರ
ಮಾನವ ಲೂಟಿ ಹೊಡೆದವರು, ಸೀರೆ ಕದ್ದವರು
ಮಹಾರಾಜರ ಹುಡದಿ ದ್ರೌಪದಿಯ ಮಾನ ಉಳಿಸಲು
ಜಗದ ಸೀರೆಯನೆಲ್ಲ ಹೊತ್ತು ತಂದವರು ॥ಕಣ್ಣಾ ಮುಚ್ಚೆ॥

ಇವರೇ ಅವರು ಗಾಂಧಿ ಎಂಬುವರು, 'ಮಹಾತ್ಮರು'
ಸತ್ಯವೇ ದೇವರೆಂದವರು. 'ಭಾರತದ ಪಿತಾಮಹರು'
1932ರ ಲಂಡನ್, ದುಂಡುಮೇಜು ಪರಿಷತ್ತಿನಲ್ಲಿ
ಭಾರತದಲ್ಲಿ ಅಸ್ಪೃಶ್ಯತೆಯೇ ಇಲ್ಲವೆಂದು ವಾದಿಸಿ
ತಮ್ಮ ಸತ್ಯದ "ಸ್ಯಾಂಪಲ್ಲನ್ನು" ತೋರಿಸಿದವರು
ವರ್ಣಧರ್ಮವನ್ನು ಸಮರ್ಥಿಸಿಯೂ
ಅಸ್ಪೃಶ್ಯರ ಉದ್ಧಾರಕನೆಂದು ಹೊಗಳಿಸಿಕೊಂಡವರು

॥ಕಣ್ಣಾ ಮುಚ್ಚೆ॥

ಇವರೇ ಅವರು ಬಿಳಿಯ ಕಿರೀಟುಧಾರಿಗಳು
ಗದೆ ಹಿಡಿಯದ ಸಮರ ಶೂರರು
ಸೋಸಿಯಾಲಿಷ್ಟ ಮಾದರಿಯ ಸಮಾಜ ತರುತ್ತೇವೆಂದವರು
ಶೋಷಿತರ ಸಲುವಾಗಿ ಸರ್ವತ್ಯಾಗಕ್ಕೂ ಸಿದ್ಧವೆಂದವರು
ಭೂಮಿ, ವಸತಿ, ಅನ್ನ ಕೊಡುತ್ತೇವೆಂದವರು
ಐದು ವರ್ಷಕ್ಕೊಮ್ಮೆ ಮನೆಮನೆಗೂ ಬಂದು
ಆಶ್ವಾಸನೆಗಳ ಅನ್ನ ಉಣಿಸಿ ಓಟು ಕದ್ದವರು
ಉಳ್ಳವರ ಎಂಜಲು ತಿಂದು, ನಾಯಿಗಳ ಹಾಗೆ
ಇವರ ಮನೆಯ ಕಾಯ್ದವರು
ಐದು ಸ್ಟಾರಿನ ಹೊಟೆಲುಗಳಲ್ಲಿ ಬೆಚ್ಚಗಿನ ಮೈಗಳಲಿ
ಲೋಕ ಕಲ್ಯಾಣ ಕಂಡವರು

॥ಕಣ್ಣಾ ಮುಚ್ಚೆ॥

ಅವರೇ ಇವರು ದಲಿತ ಶೋಷಿತರು
ಮಾಲೀಕರ ಕ್ರೌರ್ಯದಲ್ಲಿ, ಧರ್ಮ ಸಂಸ್ಕೃತಿಯ ಪಹರೆಯಲಿ
ಸಿಕ್ಕಿ ಸುರುಳಿ-ಸುರುಳಿಯಾಗಿ ನರಳಿದವರು
ಬೆಂದವರು, ಕೆಂಡವಾಗಿ ಉರಿದವರು
ಕತ್ತಲೆಯ ದಾರಿಯಲಿ ಪಂಜುಗಳ ಹಿಡಿದವರು
ಒಟ್ಟಾಗಿ ಕಿತ್ತೆದ್ದು ದಿಟ್ಟ ಹೆಜ್ಜೆ ಇಟ್ಟವರು
ಕತ್ತಲೆಯನು ಸೀಳಿ, ಶೋಷಕರನು ಹೂಳಿ
ಮೂಡಣದ ದಿಕ್ಕಲ್ಲಿ ಸಾಗುತಿರುವಾಗ
ಕೆಂಪು ಸೂರ್ಯ ಕಂಡು ಹಿಗ್ಗುವಾಸೆ ಕಂಡ ನನ್ನ ಜನರು

—ಎಂ. ಎಂ. ಕರಾಳೆ

...ದ್ಯಾರ್ಥಿ ಸಾವಿಗೆ ಹೊಣೆ ಯಾರು ?

(...ನೇ ಪುಟದಿಂದ)

...ದೆರಡುದಿನ ಜ್ವರ ಪೀಡಿತನಾಗಿದ್ದ ತಿಪ್ಪೇ ...ಮಿ ಬಗೆಗೆ ಹಾಸ್ಟೆಲಿನ ಆಡಳಿತವರ್ಗ ...ನವೀಯ ದೃಷ್ಟಿಯಿಂದ ಸ್ವಲ್ಪ ಮುತು ...ರ್ಜ ವಹಿಸಿದ್ದರೆ ಆತನನ್ನು ಉಳಿಸಬಹು ...ತ್ತು. ಹಾಸ್ಟೆಲಿನ ಕಾರ್ಯದರ್ಶಿ ಸ್ವತಃ ...ಎಸ್ ಐ. ವೈದ್ಯರಾಗಿರುವುದರಿಂದ ತಿಪ್ಪೇ ...ಮಿಯ ಆರೋಗ್ಯ ಪರೀಕ್ಷಿಸಿ ಎಚ್ಚರಿಕೆ ...ಸಿದ್ದರೆ ಆ ಸಾವನ್ನು ತಡೆಯಬಹುದಿತ್ತೆಂ ...ದು ತಿಪ್ಪೇಸ್ವಾಮಿ ಗೆಳೆಯರ ಮಾತು.

...ಪ್ಪೇಸ್ವಾಮಿ ಎಸ್.ಎಫ್.ಐ ಗೆ ಬೆಂಬಲ ...ಡುತ್ತಿದ್ದ ಎಂಬ ಕಾರಣಕ್ಕಾಗಿ ಆಡಳಿತ ...ರ್ಗ ಆತನ ಬಗ್ಗೆ ಉಪೇಕ್ಷೆ ತೋರಿತೆಂದು ...ಳಲಾಗಿದೆ. ಆದ್ದರಿಂದ ಆತನಿಗೆ ಹಣ್ಣು ...ಪಲು, ಹಾಲು ಬ್ರೆಡ್ ಮಾತಿರಲಿ ಕುಡಿ ...ಲು ಬಿಸಿ ನೀರನ್ನು ಕೊಡುತ್ತಿರಲಿಲ್ಲ ಎಂಬ ...ರು ಇದೆ.

...ಳಿತವರ್ಗದ ಕ್ರೂರ ದೃಷ್ಟಿಗೆ ಒಳಗಾದ್ದ ...ದ ಒಂದೆರಡು ದಿನಗಳಲ್ಲಿ ತೀವ್ರ ಅಸ್ವಸ್ಥ ...ಂದ ತಿಪ್ಪೇಸ್ವಾಮಿ ಕಳೆದ ಡಿಸೆಂಬರ್ 1 ...ದು ವಿಕ್ಟೋರಿಯಾ ಆಸ್ಪತ್ರೆ ಸೇರಿ ಮರು ... ಕೊನೆ ಉಸಿರೆಳೆದ. ಆಸ್ಪತ್ರೆಗೆ ದಾಖಲು ...ಡಿಕೊಳ್ಳುವಾಗ ಪ್ರಾಣಕ್ಕೆ ಅಪಾಯವಿಲ್ಲ ...ದ ಡಾಕ್ಟರ್, ತಿಪ್ಪೇಸ್ವಾಮಿ ಸತ್ತಾಗ ...ದುಳುಜ್ವರ ಇತ್ತೆಂದು ತಿಳಿಸಿದ್ದಾರೆ.

...ನಿಕಾರಕ ಮಿದುಳುಜ್ವರ ಈವರೆಗೆ ಬೆಂಗಳೂ ...ಲ್ಲಿ ಕಾಣಿಸಿಕೊಂಡೇ ಇಲ್ಲ. ಪತ್ರಿಕೆಗಳಲ್ಲಿ ... ಸುದ್ದಿ ಬಂದ ನಂತರವೂ ಆರೋಗ್ಯ ...ಖೆ ಈ ಬಗ್ಗೆ ತುಟಿಬಿಚ್ಚಲಿಲ್ಲ. ಆದ್ದ ...ವ ಈ ಸಾವಿನ ಬಗ್ಗೆ ಕಾರಣ ಹುಡು ...ತ್ತಾ ಹೋದಂತೆ ಅನೇಕ ಸಂಶಯಗಳು ...ತ್ತ ಈ ಮುಗ್ಧ ವಿದ್ಯಾರ್ಥಿ ಸಾವಿಗೆ ...ಣೆಯಾರೆಂಬ ಪ್ರಶ್ನೆಗೆ ಉತ್ತರ ದೊರೆಯು ...ದೇನೂ ? ಆದ್ದರಿಂದ ಈ ಬಗ್ಗೆ ...ರ್ಕಾರ ನ್ಯಾಯಾಂಗ ತನಿಖೆ ನಡೆಸುವುದಾ ...ತ್ಯ.

... ಎಲ್ಲ ಶಂಕೆಗಳು ಮತ್ತು ಆಡಳಿತವರ್ಗದ ...ಪೇಕ್ಷೆ ವಿರುದ್ಧ ಸಿಡಿದೆದ್ದ ಹಾಸ್ಟೆಲಿನ ...ದ್ಯಾರ್ಥಿಗಳು ಡಿಸೆಂಬರ್ 4ರಂದು ತರಗತಿಗಳಿಂದ ಹೊರಬಂದು ಸಹಪಾಠಿ ತಿಪ್ಪೇಸ್ವಾಮಿಯ ಸಾವಿನ ಬಗ್ಗೆ ನ್ಯಾಯಾಂಗ ತನಿಖೆಗೆ ಒತ್ತಾಯಿಸಲು ವಿಧಾನ ಸೌಧಕ್ಕೆ ಮೆರವಣಿಗೆಯಲ್ಲಿ ಹೊರಟು ಸಮಾಜ ಕಲ್ಯಾಣ ಮತ್ತು ಶಿಕ್ಷಣ ಸಚಿವರನ್ನು ಕಂಡು ದಲಿತ ವಿದ್ಯಾರ್ಥಿಗಳ ಜೀವಉಳಿಸಬೇಕೆಂದು ಮನವಿ ಸಲ್ಲಿಸಿದರು.

ರಾಜ್ಯದ ಪ್ರತಿಷ್ಠಿತ ಲೋಕಸೇವಾ ಆಯೋಗದ ಅಧ್ಯಕ್ಷ ದುಗ್ಗಪ್ಪನವರು ಅಧ್ಯಕ್ಷರಾಗಿರುವ ಈ ಹಾಸ್ಟೆಲಿನ ಆಡಳಿತವರ್ಗ ಇಂತಹ ಸಾವು-ನೋವು, ಪ್ರತಿಭಟನೆಗಳನ್ನು ಕೇರ್ ಮಾಡದೆ ಕುಳಿತಿದೆ. ತಿಪ್ಪೇಸ್ವಾಮಿ ಸತ್ತು ತಿಂಗಳು ಉರುಳಿದರೂ ಆತನ ವಿಧವೆ ತಾಯಿಗೆ ಸೂಕ್ತ ಪರಿಹಾರ ನೀಡುವ ಮಾನವೀಯ ಕರ್ತವ್ಯ ತೋರಲು ಆಡಳಿತವರ್ಗವಾಗಲಿ ಅಥವಾ ಸರ್ಕಾರವಾಗಲಿ ಮುಂದಾಗದಿರುವುದು ಖಂಡನೀಯ.

ಹಾಸ್ಟೆಲಿನ ಭ್ರಷ್ಟಾಚಾರಗಳನ್ನು ಬಟ್ಟಬಯಲು ಮಾಡಿ ವಿದ್ಯಾರ್ಥಿಗಳಿಗೆ ಹೋರಾಟದ ಪಾಠ ಹೇಳಿಕೊಟ್ಟ ಎಸ್.ಎಫ್.ಐ. ಕಾರ್ಯಕರ್ತ ಗೋಪಾಲಕೃಷ್ಣ ಮುಂತಾದವರ ಮೇಲೆ ಆಡಳಿತವರ್ಗ ಗೂಂಡಾಗಳನ್ನು ಬಿಟ್ಟು ನಡೆಸುತ್ತಿರುವ ಹಲ್ಲೆ ನೀಚತನದ್ದು.

ವಿದ್ಯಾರ್ಥಿಗಳನ್ನು ಒಳ್ಳೆಯ ವಾತಾವರಣದಲ್ಲಿ ಬೆಳೆಸಬೇಕಾಗಿರುವ ಹಾಸ್ಟೆಲುಗಳು ವಿದ್ಯಾರ್ಥಿಗಳ ದುರ್ಮರಣಗಳ ತಾಣವಾಗಿರುವುದು ಬಾಪೂಜಿ ಹಾಸ್ಟೆಲು ಮಾತ್ರ ಹೊರತೇನಲ್ಲ. ಕಳೆದ ವರ್ಷ ಬೆಂಗಳೂರಿನ ಜಯನಗರದ ದಲಿತ ಬಾಲಕೀಯರ ಹಾಸ್ಟೆಲಿನ ವಿದ್ಯಾರ್ಥಿಯೊಬ್ಬಳ ಶವ ಬಾವಿಯಲ್ಲಿ ತೇಲುತ್ತಿದ್ದುದು ಕಂಡುಬಂತು, ಈ ನಿಗೂಢ ಸಾವಿಗೆ ಕಾರಣವೇನೆಂಬುದು ಹೊರಬರಲಿಲ್ಲ. ರಾಜ್ಯದಲ್ಲಿನ ಎಲ್ಲ ಖಾಸಗಿ ದಲಿತ ವಿದ್ಯಾರ್ಥಿ ನಿಲಯಗಳ ಸ್ಥಿತಿ ಒಂದೆ,

ದಲಿತ ಮಕ್ಕಳ ಉದ್ಧಾರದ ಹೆಸರಿನಲ್ಲಿ ದಲಿತ ವರ್ಗದ ಪುಢಾರಿಗಳು ಈ ಹಾಸ್ಟೆಲುಗಳ ಸರದಾರರು. ಸರ್ಕಾರದಿಂದ ಸಹಸ್ರಾರು ರೂ. ಲಪಟಾಯಿಸುವ ಇವರು ಈ ಹಣವನ್ನೆಲ್ಲ ತಮ್ಮ ರಾಜಕೀಯಕ್ಕೆ ಬಂಡವಾಳವನ್ನಾಗಿ ತೊಡಗಿಸಿ ದಲಿತ ಮಕ್ಕಳ ರಕ್ತಹೀರುತ್ತಿದ್ದಾರೆ. ಆಳುವ ಸರ್ಕಾರದ ಪಾಲುದಾರರೂ ಇವರೇ ಆಗಿರುವುದರಿಂದ ಸರ್ಕಾರ ಈ ಎಲ್ಲ ಖಾಸಗಿ ಹಾಸ್ಟೆಲುಗಳನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಳ್ಳಬೇಕೆಂಬ ಸಾರ್ವಜನಿಕ ಬೇಡಿಕೆ ನಗೆಪಾಟಲಾಗಬಹುದೇನೋ ? ಆದರೂ ನೂರಾರು ತಿಪ್ಪೇಸ್ವಾಮಿಗಳನ್ನು ರಕ್ಷಿಸುವ ಹೊಣೆಗಾರಿಕೆ ಎಚ್ಚೆತ್ತ ದಲಿತರ ಮೇಲಿದೆ ಎಂಬುದನ್ನು ಮರೆಯಲಾಗದು,

ಇಬ್ಬರು ದಲಿತ ಯುವಕರ ಮೇಲೆ ಅಮಾನುಷ ಹಲ್ಲೆ

ಹನ್ನೆರಡು ರೂಪಾಯಿ ಸಾಲದ ಮಾತಿಗಾಗಿ ಪಿರಿಯಾಪಟ್ಟಣ ತಾಲ್ಲೂಕು ಅತ್ತಿಗೋಡು ಗ್ರಾಮದ ತಮ್ಮಣ್ಣ ಎಂಬ ದಲಿತ ಯುವಕನೊಬ್ಬನನ್ನು ಆ ಗ್ರಾಮದ ಛೇರ್ಮನ್ ಸಿದ್ದಲಿಂಗಶೆಟ್ಟಿಯ ಕುಹಕದಿಂದ ಹಾಡುಹಗಲಲ್ಲೇ ಹಗ್ಗದಲ್ಲಿ ಕಟ್ಟಿಹಾಕಿ ಚಿತ್ರಹಿಂಸೆ ನೀಡಿದ ಹೃದಯ ವಿದ್ರಾವಕ ಘಟನೆ ವರದಿಯಾಗಿದೆ.

ಈ ಘಟನೆ ಸಂಬಂಧದಲ್ಲಿ ದೂರು ನೀಡಿದ್ದರೂ ಪೋಲೀಸರು ಅದನ್ನು ಮುಚ್ಚಿಹಾಕಲು ನಾನಾ ಬಗೆಯ ಹೊಟಹೂಡಿದ್ದಾರೆ.

ಈ ಘಟನೆಯಲ್ಲದೆ ಭೂಮಾಲೀಕರೆಲ್ಲ ಒಟ್ಟಾಗಿ ದಲಿತರ ಮೇಲೆ ನಿರಂತರ ಹಲ್ಲೆ ನಡೆಸುತ್ತಿದ್ದಾರೆ,

ಮತ್ತೊಂದು ಹಲ್ಲೆ

ದುಡಿಸಿಕೊಂಡು ಕೂಲಿಕೊಡದೆ ಮೋಸ ಮಾಡುತ್ತಿದ್ದ ಅಫಜಲಪುರ ತಾಲ್ಲೂಕಿನ ಕುಲಾಲಿ ಗ್ರಾಮದ ಚೇರ್ಮನ್ ಶಾಂತಪ್ಪಗೌಡ ಸಿದ್ರಾಮಪ್ಪಗೌಡರ ಹೊಲದಲ್ಲಿ ದಿನಗೂಲಿಗೆ ಮತ್ತೆ ಹೋಗಲು ನಿರಾಕರಿಸಿದ ದಲಿತ ಯುವಕ ವಿಠಲ ಸಾತಪ್ಪ ಕಳಸನವರ ಅವರನ್ನು ಇತ್ತೀಚೆಗೆ ಸವರ್ಣೀಯರೆಲ್ಲ ಸೇರಿ ಭಯಂಕರವಾಗಿ ಥಳಿಸಿದ್ದಾರೆ.

ಈ ಸಂಬಂಧದಲ್ಲಿ ನೀಡಿದ ದೂರಿನ ಬಗ್ಗೆ ಪೋಲೀಸರು ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಹಲ್ಲೆಗೀಡಾದ ವಿಠಲ ಅವರಿಗೆ ಈಗ ಸ್ಥಳೀಯ ದಲಿತ ಸಂಘರ್ಷ ಸಮಿತಿ ಬೆಂಬಲವಾಗಿ ನಿಂತಿದೆ.

KRNB 364 Panchama Fortnightly 5, January 1981 Regd.No. 29681/

ರಾಜ್ಯಾದ್ಯಂತ ಸಾಮಾಜಿಕ ಬಹಿಷ್ಕಾರ ವಿರುದ್ಧ ಪ್ರತಿಭಟನೆ

ರಾಜ್ಯದ ನಾನಾ ಹಳ್ಳಿಗಳಲ್ಲಿ ದಲಿತರ ಮೇಲೆ ವಿಧಿಸಲಾಗಿರುವ ಸಾಮಾಜಿಕ ಬಹಿಷ್ಕಾರ ಮತ್ತು ವ್ಯಾಪಕವಾಗಿರುವ ಅಸ್ಪೃಶ್ಯತೆ ಆಚರಣೆ ವಿರೋಧಿಸಿ ಡಾ. ಬಿ. ಆರ್. ಅಂಬೇಡ್ಕರ್ ಅವರ 24ನೇ ಸ್ಮರಣ ದಿನದಂದು ದಲಿತ ಸಂಘರ್ಷ ಸಮಿತಿ ರಾಜ್ಯಾದ್ಯಂತ ಸಾಮಾಜಿಕ ಬಹಿಷ್ಕಾರ ವಿರೋಧಿ ದಿನವನ್ನು ಆಚರಿಸಿತು.

ಬೆಂಗಳೂರಿನಲ್ಲಿ ಐಜಿಪಿ ಕಚೇರಿ ಮತ್ತು ಎಲ್ಲ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿ ಹಾಗೂ ಎಸ್.ಪಿ. ಕಚೇರಿಗಳ ಎದುರು ಅಂದು ಸಂಘರ್ಷ ಸಮಿತಿ ಕಾರ್ಯಕರ್ತರು ಧರಣಿ-ಪ್ರತಿಭಟನೆ ನಡೆಸಿದರು.

ರಾಜ್ಯಸಮಿತಿ ಕರೆ ಮೇಲೆ ನಡೆದ ಈ ಕಾರ್ಯಕ್ರಮ ಎಲ್ಲಡೆ ಯಶಸ್ವಿಯಾದ ವರದಿಗಳು ಬಂದಿವೆ.

ಕೋಲಾರ ಜಿಲ್ಲಾ ಡಿಯುಸೆಕ್ ಅಂಬೇಡ್ಕರ್ ಅವರ 24ನೇ ಸ್ಮರಣ ದಿನವನ್ನು ವಿಮೋಚನಾ ಹೋರಾಟದ ಪ್ರತಿಜ್ಞಾ ಸಪ್ತಾಹವನ್ನಾಗಿ ಆಚರಿಸಿತು.

ಈ ಸಪ್ತಾಹದ ಅಂಗವಾಗಿ ಕೋಲಾರ, ವೇಮಗಲ್, ಮಾರ್ಚೀನಹಳ್ಳಿ, ವೆಗಲಬುರ್ರಿ, ಸುಗಟೂರು, ವಡಗೂರು ಕ್ಯಾಲನೂರು ಮುಂತಾದ ಕಡೆ ಸಾಂಸ್ಕೃತಿಕ ಕಾರ್ಯಕ್ರಮ ನೀಡಲಾಯಿತು.

19-12-80ರಂದು ಬೇತಮಂಗಲದಲ್ಲೂ ಪ್ರತಿಜ್ಞಾ ಸಪ್ತಾಹ ನಡೆಯಿತು. ಮೆರವಣಿಗೆ ನಂತರ ನಡೆದ ಸಭೆಯನ್ನುದ್ದೇಶಿಸಿ ದಲಿತ ಕವಿ ಸಿದ್ಧಲಿಂಗಯ್ಯ ಮುಂತಾದವರು ಮಾತನಾಡಿದರು.

ಅಂಬೇಡ್ಕರ್ ಅವರ ಸ್ಮರಣ ದಿನದ ಸಪ್ತಾಹವನ್ನು ಬೆಂಗಳೂರಿನಲ್ಲಿ ಒಂದು ವಾರ ಸತತವಾಗಿ ದಲಿತರ ಬಡಾವಣೆಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನೀಡುವ ಮೂಲಕ ಆಚರಿಸಲಾಯಿತು.

ನಿವೇಶನಕ್ಕಾಗಿ ಕುರುಬ ದೊಡ್ಡಿ ದಲಿತರ ಮನವಿ

ರಾಯಚೂರು ತಾಲ್ಲೂಕು ಕುರುಬದೊಡ್ಡಿ ಗ್ರಾಮದ ದಲಿತರ ನಿವೇಶನಕ್ಕೆ ಎಂದು ಸರ್ಕಾರ 1964ರಲ್ಲಿ ಮಂಜೂರು ಮಾಡಿದ ಎರಡು ಎಕರೆ ಜಮೀನಿನಲ್ಲಿ ಈವರೆಗೆ ನಿವೇಶನ ಹಂಚದಿರುವುದು ಶೋಚನೀಯ.

ಕಡತಗಳ ಯಜ್ಞ ಮಾಡುತ್ತಿರುವ ಸರ್ಕಾರ ಇತ್ತ ಗಮನಹರಿಸಿ ಕೂಡಲೇ ದಲಿತರಿಗೆ ನಿವೇಶನ ಹಂಚಬೇಕೆಂದು ದಲಿತ ಸಂಘರ್ಷ ಸಮಿತಿ ರಾಯಚೂರು ಜಿಲ್ಲಾ ಶಾಖೆ ಒತ್ತಾಯಿಸಿದೆ.

ತಿಪಟೂರು ಬಳಿ ದಲಿತ ಮಹಿಳೆ ಮೇಲೆ ತೀವ್ರ ಹಲ್ಲೆ

ತಮಗಿರುವ 20 ಗುಂಟೆ ಜಮೀನಿನಲ್ಲಿ ಅಷ್ಟೋ ಇಷ್ಟೋ ಬೆಳೆದಿರುವ ಬೆಳೆಯನ್ನು ದನಗಳನ್ನು ಬಿಟ್ಟು ಮೇಯಿಸುತ್ತಿದ್ದ ಸವರ್ಣೀಯರನ್ನು ಕೇಳಿದ್ದಕ್ಕಾಗಿ ದಲಿತ ಮಹಿಳೆ ಲಕ್ಷ್ಮಮ್ಮ ಎಂಬಾಕೆ ಮೇಲೆ ಇತ್ತೀಚೆಗೆ ಅಮಾನುಷ ಹಲ್ಲೆ ನಡೆದದ್ದು ತಿಪಟೂರು ತಾಲ್ಲೂಕಿನ ಶೆಟ್ಟಿಹಳ್ಳಿಯಿಂದ ವರದಿಯಾಗಿದೆ.

ತುಂಬು ಗರ್ಭಿಣಿಯಾಗಿದ್ದ ಲಕ್ಷ್ಮಮ್ಮನನ್ನು ಷಡಕ್ಷರಿ, ಪಟೇಲ್ ಪುಟ್ಟಮಲ್ಲಯ್ಯ, ಗಂಗಾಧರಯ್ಯ, ಶಿವ, ಗೌರಮ್ಮ ದೊಣ್ಣೆ ಕೋಲುಗಳಿಂದ ಮನಸಾರ ಹೊಡೆದು ಗಾಯಗೊಳಿಸಿದ್ದಾರೆ.

ತನ್ನ ಪತ್ನಿ ಮೇಲಿನ ಈ ಹಲ್ಲೆ ಕಂಡು ಓಡಿಬಂದ ಚಂದ್ರಯ್ಯ ಮತ್ತು ಗೆಳೆಯ ಚೆನ್ನಯ್ಯ ಎಂಬುವವರನ್ನೂ ಥಳಿಸಲಾಗಿದೆ.

ಈ ಹಲ್ಲೆ ಬಗ್ಗೆ ದೂರು ನೀಡಿದ್ದರೂ ಪೋಲೀಸರು ಕೇಸು ದಾಖಲು ಮಾಡಿಕೊಳ್ಳದೆ ದಲಿತರನ್ನೇ ಬೆದರಿಸಿ ಕಳುಹಿಸಿದ್ದಾರೆ.

ಸವರ್ಣೀಯರ ಹಲ್ಲೆ ಮತ್ತು ಪೋಲೀಸರ ಈ ನಡವಳಿಕೆಯನ್ನು ದಲಿತ ಸಂಘರ್ಷ ಸಮಿತಿ ತಿಪಟೂರು ತಾಲ್ಲೂಕು ಶಾಖೆ ಖಂಡಿಸಿದೆ.

ಈ ಪತ್ರಿಕೆಯು ರಾಮದೇವ ರಾಕೆ ಅವರ ಸಂಪಾದಕತ್ವದಲ್ಲಿ, ನೂತನ್ ಪ್ರಿಂಟಿಂಗ್ ಪ್ರೆಸ್, ಬೆಂಗಳೂರು-3 ಇಲ್ಲಿ ಮುದ್ರಿಸಲ್ಪಟ್ಟು ಎಚ್. ಗೋವಿಂದಯ್ಯ ಅವರಿಂದ ಪ್ರಕಟಿಸಲ್ಪಟ್ಟಿತು. ವಿಳಾಸ : 5ಎ-ವಾಣಿ ವಾಣಿಜ್ಯಶಾಲಾ, ಪತ್ರಕರ್ತರ ಕಾಲೋನಿ. ಬೆಂಗಳೂರು-560002.